

# ಸಮನ್ವಯ ಶಿಕ್ಷಣ



– ಎನ್.ಶೈಲಜಾ ಹಾಸನ, ಸಹಶಿಕ್ಷಕಿ, ಸರಕಾರಿ ಪದವಿಪೂರ್ವ ಕಾಲೇಜು, ಪ್ರೌಢಶಾಲಾ ವಿಭಾಗ, ಶಾಂತಿಗ್ರಾಮ, ಹಾಸನ ಜಿಲ್ಲೆ. ಮೊ: 9448653282

ಜನಿಸಿದ ಎಲ್ಲಾ ಮಕ್ಕಳಿಗೂ ಶಿಕ್ಷಣ ಪಡೆಯುವ ಹಕ್ಕಿರುತ್ತದೆ 6 ರಿಂದ 14 ವರ್ಷದ ಮಕ್ಕಳಿಗೆ ಸರ್ಕಾರವು ಶಿಕ್ಷಣವನ್ನು ಕಡ್ಡಾಯಗೊಳಿಸಿದೆ. ಆದರೆ ಎಲ್ಲಾ ಮಕ್ಕಳೂ ಒಂದೇ ರೀತಿ ಇರುವುದಿಲ್ಲ. ಕೆಲ ಮಕ್ಕಳು ದೈಹಿಕವಾಗಿ ಮಾನಸಿಕವಾಗಿ ನ್ಯೂನ್ಯತೆಗಳನ್ನು ಹೊಂದಿರುತ್ತಾರೆ. ಅಂತಹ ಮಕ್ಕಳಿಗೆ ಹೇಗೆ ಶಿಕ್ಷಣ ನೀಡುವುದು ? ಎಲ್ಲಾ ಸಾಮಾನ್ಯ ಮಕ್ಕಳ ಜೊತೆ ಶಿಕ್ಷಣ ನೀಡುವುದೋ ಅಥವಾ ಅಂತಹ ಮಕ್ಕಳನ್ನು ಪ್ರತ್ಯೇಕವಿರಿಸಿ ಶಿಕ್ಷಣ ಕೊಡಬೇಕೇ ಎಂಬುದು ಒಂದು ಪ್ರಶ್ನೆ.

ಸಾಮಾನ್ಯ ಶಿಕ್ಷಣವು ಎಲ್ಲಾ ರೀತಿಯ ಮಕ್ಕಳನ್ನು ಒಳಗೊಂಡಿರುತ್ತದೆ. ಸರ್ವರಿಗೂ ಶಿಕ್ಷಣ ಎಂಬ ವಿಚಾರಧಾರೆಯ ವ್ಯಾಪ್ತಿಯಲ್ಲಿ ವಿವಿಧ ಸಾಮಾರ್ಥ್ಯವುಳ್ಳ ಮಕ್ಕಳು ಅಂದರೆ ವಿಕಲಚೇತನರು, ವಿಶೇಷ ಅಗತ್ಯವುಳ್ಳ ಮಕ್ಕಳು ಕೂಡ ಎಲ್ಲರಂತೆ ಶಿಕ್ಷಣ ಪಡೆಯಲು ಬದ್ದರಾಗಿದ್ದಾರೆ. ಈ ಮಕ್ಕಳು ಸಾಮಾನ್ಯ ಮಕ್ಕಳ ಜೊತೆಯಲ್ಲಿಯೇ ಶಿಕ್ಷಣ ಪಡೆದು ಸಮಾಜದ ಮುಖ್ಯವಾಹಿನಿಯಲ್ಲಿ ಸೇರ್ಪಡೆಯಾಗಬೇಕು ಎಂಬುದೇ ಸರ್ಕಾರ ಸಮನ್ವಯ ಶಿಕ್ಷಣವನ್ನು ಜಾರಿಗೆ ತಂದಿದೆ.

ತರಗತಿಯಲ್ಲಿ ಕಲಿಸುವಾಗ ಎಲ್ಲ ಮಕ್ಕಳಿಗೂ ಸಮಾನ ವಾತಾವರಣವನ್ನು ಒದಗಿಸುತ್ತಾರೆ. ಆದರೂ ಮಕ್ಕಳ ಗ್ರಹಿಕೆ ಒಂದೇ ರೀತಿ ಇರುವುದಿಲ್ಲ, ಮಗುವಿಗೆ ಗ್ರಹಿಸಲು ನ್ಯೂನ್ಯತೆ ಇದ್ದಾಗ ಕಲಿಕೆಯ ನಿರೀಕ್ಷೆಗಳ ಮಟ್ಟ ಬದಲಾಗಬೇಕಾಗುತ್ತದೆ ವಿವಿಧ ಸಾಮರ್ಥ್ಯವುಳ್ಳ ಮಕ್ಕಳನ್ನು ಒಂದೇ ತರಗತಿಯಲ್ಲಿಟ್ಟು ಕಲಿಕೆ ಬೋಧನೆಯ ವಿಧಾನಗಳನ್ನು ವೈಯುಕ್ತಿಕ ಭಿನ್ನತೆ ಅಗತ್ಯತೆ, ಸರಿಹೊಂದಿಸಿ ಬೋಧಿಸುವುದರಿಂದ ಎಲ್ಲಾ ಮಕ್ಕಳು ತಮ್ಮ ತಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ಅಭಿವೃದ್ಧಿ ಮತ್ತು ವಿಕಾಸ ಹೊಂದಲು ಸಾಧ್ಯವಾಗುತ್ತದೆ. ಇಂತಹ ಸಾಧ್ಯತೆಯ ಆಶಯವೇ ಸಮನ್ವಯ ಶಿಕ್ಷಣದ್ದಾಗಿದೆ.

ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಸಾಮಾನ್ಯ ಮಕ್ಕಳ ಜೊತೆ ಶಿಕ್ಷಣ ಕೊಡಬೇಕೆ, ಕೊಟ್ಟರೆ ಅದು ಯಶಸ್ವಿಯಾದೀತೇ ಎಂಬ ಗೊಂದಲ ಕಾಡುವುದು ಸಹಜ ಆದರೆ ಅನುಕೂಲಕರ ಪರಿಸರ, ಸ್ಫೂರ್ತಿ, ವಿಶೇಷ ತರಬೇತಿ ದೊರೆತಾಗ ವಿಕಲ ಚೇತನ ಮಕ್ಕಳು ಇತರರಂತೆ ಸಾಮಾನ್ಯರಿಗಿಂತ ಹೆಚ್ಚು ಸಾಧನೆ ಮಾಡುತ್ತಾರೆ, ಮಾಡಿದ್ದಾರೆ ಎಂಬುದು ಅನೇಕ ಸಂದರ್ಭಗಳಲ್ಲಿ ದೃಢಪಟ್ಟಿದೆ.

ವಿಶೇಷ ಅಗತ್ಯತೆಯುಳ್ಳ ಮಕ್ಕಳಿಗೆ ಹಾಗು ಕಲಿಕೆಯಲ್ಲಿ ಭಿನ್ನತೆಯುಳ್ಳ ಮಕ್ಕಳಿಗೆ ಅವಕಾಶ ಒದಗಿಸುವುದು ಒಂದು ನಾಗರೀಕ ವ್ಯವಸ್ಥೆಯ ಜವಾಬ್ದಾರಿಯಾಗಿದೆ ಸಾಮಾನ್ಯ ಶಾಲೆ ಮತ್ತು ತರಗತಿಗಳಲ್ಲಿ ಸಾಮಾನ್ಯ ಮಕ್ಕಳೊಂದಿಗೆ ವಿಶೇಷ ಅಗತ್ಯವುಳ್ಳ ಮಕ್ಕಳನ್ನು ಸಮನ್ವಯಗೊಳಿಸುವುದು ಮಾನವ ಹಕ್ಕುಗಳ ಆಶಯಕ್ಕೆ ಪೂರಕವಾಗಿದೆ.

ವಿಶ್ವಸಂಸ್ಥೆಯು ಮಗುವಿನ ಹಕ್ಕುಗಳ ಬಗ್ಗೆ ಮಾಡಿದ ಒಪ್ಪಂದದ ಪ್ರಕಾರ "ಯಾವುದೇ ಸ್ವರೂಪದ ನ್ಯೂನ್ಯತೆ ಇರುವ ಮಗು ಅದೇ ವಯಸ್ಸಿನ ಸಾಮಾನ್ಯ ಮಕ್ಕಳಂತೆ ಗೌರವಾನ್ವಿತ ಬಾಳ್ವೆ ನಡೆಸಲು ಬೇಕಾಗಿರುವ ಎಲ್ಲಾ ಹಕ್ಕುಗಳನ್ನು ಹೊಂದಿರುತ್ತದೆ" ಎಂದು ಘೋಷಿಸಿದೆ.

ಯುನೆಸ್ಕೋರವರ 1994ರ 'ಸಲಮಾಂಕ' ಹೇಳಿಕೆಯು ಭಿನ್ನತೆ ಅಥವಾ ಯಾವುದೇ ರೀತಿಯ ಸಮಸ್ಯೆಗಳನ್ನು ಲೆಕ್ಕಿಸದೆ ಎಲ್ಲಾ ಮಕ್ಕಳಿಗೂ ಶಿಕ್ಷಣವನ್ನು ಒದಗಿಸಲು ಅನುವಾಗುವಂತೆ ಶೈಕ್ಷಣಿಕ ಸೇವೆಗಳನ್ನು ಉತ್ತಮ ಪಡಿಸಲು ಸೂಚಿಸಿದೆ. ಅದರಂತೆ ಎಲ್ಲರಿಗೂ ಭೇದವಿಲ್ಲದೆ ಶಿಕ್ಷಣ ನೀಡಲು ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಪ್ರಾಮುಖ್ಯತೆ ಹಾಗು ಆಯವ್ಯಯದಲ್ಲಿ ಆದ್ಯತೆಯನ್ನು ನೀಡುವಂತೆ ಎಲ್ಲಾ ದೇಶದ ಸರ್ಕಾರಗಳಿಗೂ ಕರೆ ನೀಡಿದೆ, ನ್ಯೂನ್ಯತೆಯುಳ್ಳ ಮಕ್ಕಳನ್ನು ಸಮೀಪದ ಸಾಮಾನ್ಯ ಶಾಲೆಗಳಿಗೆ ದಾಖಲಿಸಿ ಕಲಿಸುವಂತೆ ಕರೆ ನೀಡಿದೆ. ಸಾಮಾನ್ಯ ಶಿಕ್ಷಣವು ಎಲ್ಲಾ ರೀತಿಯ ಮಕ್ಕಳನ್ನು ಒಳಗೊಂಡಿರುತ್ತದೆ, ಆದರೆ ಅತೀ ತೀವ್ರ ಬುದ್ಧಿಮಾಂದ್ಯ, ಮೆದುಳಿನ ಪಾರ್ಶ್ವವಾಯು ಆಟಿಸಂ ಮತ್ತು ಬಹುವಿಧ ಅಂಗವಿಕಲತೆ ಹೊಂದಿದವರನ್ನು ಸಮನ್ವಯ ಶಿಕ್ಷಣದ ಅಡಿಯಲ್ಲಿ ತರಲು ಸಾಧ್ಯವಿಲ್ಲ. ವಿಕಲ ಚೇತನರು, ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಸಮನ್ವಯ ಶಿಕ್ಷಣ ವರವಾಗಿದೆ.





ಸಮನ್ವಯ ಶಿಕ್ಷಣದ ಮುಖ್ಯ ಸವಾಲು ಎಂದರೆ ಅದಕ್ಕೆ ಸಂಬಂಧಿಸಿದ ಮಕ್ಕಳನ್ನು ಶಾಲೆಗೆ ಬರುವಂತೆ ಮಾಡುವುದು ಮತ್ತು ಎಲ್ಲಾ ವಿಧದ ಕಲಿಕಾ ಅಗತ್ಯಗಳನ್ನು ಅಲ್ಲಿ ಪೂರೈಸುವುದು. ದೈಹಿಕವಾಗಿ ಮತ್ತು ಮಾನಸಿಕವಾಗಿ ಭಿನ್ನ ಸಾಮಾರ್ಥ್ಯವುಳ್ಳ ಮಕ್ಕಳ ಕಲಿಕೆಯನ್ನು ಏಕಕಾಲದಲ್ಲಿ ತರಗತಿಯ ಕೋಣೆಯಲ್ಲಿ ಪೂರೈಸಿ ಎಲ್ಲಾ ಮಕ್ಕಳು ಕಲಿಯುವಂತೆ ಮಾಡುವುದೇ ಸಮನ್ವಯ ಶಿಕ್ಷಣ.

ಇಂತಹ ಮಕ್ಕಳ ಕಲಿಕೆಗಾಗಿ ಶಿಕ್ಷಕರಿಗೆ ವಿಶೇಷ ರೀತಿಯ ತರಬೇತಿ ನೀಡಿ ಆಯಾಯಾ ಮಕ್ಕಳಿಗೆ ಅಗತ್ಯವುಳ್ಳ ಉಪಕರಣಗಳ ಸೌಲಭ್ಯವನ್ನು ನೀಡಿ ಮಕ್ಕಳ ಕಲಿಕೆಗೆ ಹೆಚ್ಚಿನ ಒತ್ತು ನೀಡುತ್ತಿದೆ. ವಿಶೇಷ ಅಗತ್ಯವುಳ್ಳ ಮಕ್ಕಳನ್ನು ಗುರುತಿಸಿ ಅಲ್ಲಿ ಎಲ್ಲಾ ರೀತಿಯ ಅನುಕೂಲವನ್ನು ಮಾಡಿಕೊಟ್ಟು ಆ ಮಕ್ಕಳನ್ನು ಮುಖ್ಯವಾಹಿನಿಗೆ ತರಲು ಸರ್ಕಾರ ಶ್ರಮಿಸುತ್ತಿದೆ.

ಸಮನ್ವಯ ಶಿಕ್ಷಣದ ಮುಖ್ಯ ಉದ್ದೇಶವೆಂದರೆ ವಿಶೇಷ ಅಗತ್ಯವುಳ್ಳ ಮಕ್ಕಳು ಸಮಾಜವನ್ನು ಧೈರ್ಯ ಮತ್ತು ಆತ್ಮ ವಿಶ್ವಾಸದಿಂದ ಎದುರಿಸಿ ಸ್ವಾವಲಂಬಿ ಜೀವನ ನಡೆಸಲು ಸಾಧ್ಯವಾಗುವಂತೆ ಮಾಡುವುದು. ಆ ಮಕ್ಕಳಿಗೆ ಕೇವಲ ಅನುಕಂಪ ತೋರದೆ ಸಮಾನ ಅವಕಾಶ ಕಲ್ಪಿಸುವ ಮನೋಭಾವ ಎಲ್ಲರಲ್ಲಿ ಬೆಳೆಸುವುದು, ಎಲ್ಲರೊಂದಿಗೆ ಸಾಮಾಜಿಕ ಆರೋಗ್ಯಕರ ಸಂಬಂಧಗಳನ್ನು ಬೆಳೆಸುವ ಮೂಲಕ ಈ ಮಕ್ಕಳನ್ನು ಸಮಾಜದ ಮುಖ್ಯ ವಾಹಿನಿಗೆ ತರುವುದು ಆಗಿದೆ.

ಈ ಮಕ್ಕಳ ಶಿಕ್ಷಣಕ್ಕಾಗಿ ಶಿಕ್ಷಕರು ತರಬೇತಿ ಪಡೆದು ಕೆಲವು ವಿಶೇಷ ಗುಣಗಳನ್ನು ತಮ್ಮದಾಗಿಸಿಕೊಂಡಿರಬೇಕಾಗುತ್ತದೆ ಇಂತಹ ಶಿಕ್ಷಕರು ಉತ್ಸಾಹಭರಿತ ಹಾಗು ಸ್ನೇಹಮಯಿ ಆಗಿರಬೇಕು, ಇಂತಹ ಮಕ್ಕಳನ್ನು ಆತ್ಮೀಯತೆಯಿಂದ ಪ್ರೀತಿಯಿಂದ ನೋಡಿಕೊಳ್ಳುವಂತವರಾಗಿರಬೇಕು, ತರಗತಿಯ ಇತರ ಮಕ್ಕಳೊಂದಿಗೆ ಒಳ್ಳೆಯ ಸಂಬಂಧ ಬೆಳೆಸಿಕೊಳ್ಳಲು ಅವಕಾಶ ಮಾಡಿಕೊಡುವಂತವರಾಗಿರಬೇಕು. ಈ ಮಕ್ಕಳ ಸಣ್ಣ ಪ್ರಗತಿಯನ್ನು ಗುರುತಿಸಿ ಪ್ರಶಂಸಿಸಬೇಕು, ಒಟ್ಟಿನಲ್ಲಿ ವಿಶೇಷ ರೀತಿಯ ಗಮನವನ್ನು ನೀಡಿ ಕಲಿಸುವ ಮನಸ್ಸು ಆಸಕ್ತಿವುಳ್ಳವರಾಗಿರಬೇಕು, ಇಂತಹ ಬೋಧನೆ ಒಂದು ಸವಾಲಾದರೂ ಕೊಂಚ ಆಸಕ್ತಿ, ಉತ್ಸಾಹ ತೋರಿದರೆ ಖಂಡಿತ ಮಕ್ಕಳಲ್ಲಿ ಪ್ರಗತಿ ತೋರಲು ಸಾಧ್ಯವಾಗಬಹುದು.

ಕುಟುಂಬ ವರ್ಗದವರು ತಮ್ಮ ಕುಟುಂಬದಲ್ಲಿ ಅಂತಹ ನ್ಯೂನ್ಯತೆ ಹೊಂದಿದ ಮಗುವಿದ್ದರೆ ಆ ಮಗುವನ್ನು ಶಾಲೆಗೆ ಸೇರಿಸುವ ಪ್ರತಿ ದಿನ ಶಾಲೆಗೆ ಕಳುಹಿಸುವ ವ್ಯವಸ್ಥೆ ಮಾಡಬೇಕು, ಸಮಾಜ ಕೂಡ ಇಂತಹ ಮಕ್ಕಳನ್ನು ಗುರುತಿಸಿ ಶಾಲೆಗೆ ಬರುವಂತೆ ಮಾಡಬೇಕು, ಎಲ್ಲರೊಂದಿಗೆ ಕಲಿಯುವ ಮಗು ತನ್ನ ಕೀಳರಿಮೆಯಿಂದ ಹೊರ ಬಂದು ಆತ್ಮ ವಿಶ್ವಾಸದಿಂದ ಬದುಕುವಂತೆ ಮಾಡುವಲ್ಲಿ ಈ ಸಮನ್ವಯ ಶಿಕ್ಷಣ ನೆರವಾಗುತ್ತಿದೆ.

ಸಮನ್ವಯ ಶಿಕ್ಷಣ ಯೋಜನೆಯಡಿ ದೊರೆಯುವ ಸೌಲಭ್ಯವನ್ನು ಉಪಯೋಗಿಸಿಕೊಂಡು ದೃಷ್ಟಿ ದೋಷ, ಶ್ರವಣ ದೋಷ, ಬುದ್ಧಿ ದೋಷ, ಕಲಿಕೆಯಲ್ಲಿ ಹಿಂದುಳಿದ ಹಾಗೂ ದೈಹಿಕ ನ್ಯೂನ್ಯತೆಯ ಪರಿಣಾಮವನ್ನು ತಗ್ಗಿಸಿ ಆತ್ಮ ಸ್ಥೈರ್ಯದಿಂದ ಬದುಕು ನಡೆಸಲು ನಾವು ನೀವು ಎಲ್ಲರೂ ನೆರವಾಗೋಣ ಆ ಮೂಲಕ ಈ ಯೋಜನೆ ಯಶಸ್ವಿಯಾಗಲು ಸಹಕರಿಸೋಣ.

## ಗೃಹಾಧಾರಿತ ಶಿಕ್ಷಣ:

ಇತ್ತೀಚಿಗೆ ಪೋಷಕರೊಬ್ಬರು ಶಾಲೆಗೆ ಬೇಟಿ ನೀಡಿ "ತಮ್ಮ ಮಗು ಮಾನಸಿಕವಾಗಿ ಬೆಳವಣಿಗೆ ಇಲ್ಲದೆ ಕುಳಿತಲ್ಲಿಯೇ ಕುಳಿತಿರುತ್ತದೆ. ತನ್ನ ಸ್ವಂತ ಕೆಲಸ ಕೂಡ ಅದಕ್ಕೆ ಮಾಡಿಕೊಳ್ಳಲು ಸಾಧ್ಯವಾಗುತ್ತಿಲ್ಲ, ಅಂತಹ ಮಕ್ಕಳೇ ಇರುವ ವಸತಿಶಾಲೆಗೆ ಸೇರಿಸಲು ಯಾರಿಗೂ ಇಷ್ಟವಿಲ್ಲ, ಎಲ್ಲಾ ಮಕ್ಕಳು ಶಾಲೆಗೆ ಬರುತ್ತಾರೆ, ನನ್ನ ಮಗುವಿಗೆ ಆ ಭಾಗ್ಯವಿಲ್ಲ". ಎಂದು ನೊಂದುಕೊಂಡರು ಅಂತಹ ಮಕ್ಕಳಿಗಾಗಿ ಗೃಹಾಧಾರಿತ ಶಿಕ್ಷಣದ ವ್ಯವಸ್ಥೆ ಇರುವುದಾಗಿ, ಮನೆಗೆ ಬಂದು ಆ ಮಗುವಿನ ಶಿಕ್ಷಣ ನೀಡುವ ವ್ಯವಸ್ಥೆ ಮಾಡುವುದಾಗಿ ಭರವಸೆ ನೀಡಿದಾಗ ಆ ಪೋಷಕರ ಕಣ್ಣುಗಳಲ್ಲಿ ಸಂತಸದ ಕಣ್ಣೀರು ಚಿಮ್ಮಿತು.

**ಏನಿದು ಗೃಹಧಾರಿತ ಶಿಕ್ಷಣ?:** ಪ್ರಾಥಮಿಕ ಶಿಕ್ಷಣದ ಸಾರ್ವತ್ರಿಕರಣದಲ್ಲಿ ಸರ್ವರಿಗೂ ಶಿಕ್ಷಣ ದೊರಕಿಸುವುದು, ಸಾಮಾನ್ಯ ಶಿಕ್ಷಣವು ಎಲ್ಲಾ ರೀತಿಯ ಮಕ್ಕಳನ್ನು ಒಳಗೊಂಡಿರುತ್ತದೆ. ಆದರೆ ಅತೀ ತೀವ್ರ ಬುದ್ಧಿಮಾಂದ್ಯ, ಮೆದುಳಿನ ಪಾರ್ಶ್ವವಾಯು, ಆಟಿಸಂ ಮತ್ತು ಬಹುವಿಧ ಅಂಗವಿಕಲತೆ ಹೊಂದಿದ ಮಕ್ಕಳನ್ನು ಸಮನ್ವಯ ಶಿಕ್ಷಣದ ಅಡಿಯಲ್ಲಿ ತರಲು ಸಾಧ್ಯವಾಗುತ್ತಿಲ್ಲ, ಏಕೆಂದರೆ ಇಂತಹ ಮಕ್ಕಳ ಕಲಿಕೆ ಮತ್ತು ಗ್ರಹಿಕೆಯ ಸಾಮಾರ್ಥ್ಯ ಅತ್ಯಂತ ತಳಮಟ್ಟದಲ್ಲಿ ಇರುತ್ತದೆ. ಇವರನ್ನು ಇತರ ಮಕ್ಕಳೊಂದಿಗೆ ಸಮನ್ವಯಗೊಳಿಸಿ ಶಿಕ್ಷಣ ನೀಡಲು ಸಾಧ್ಯವಾಗುವುದಿಲ್ಲ. ಇಂತಹ ಮಕ್ಕಳಿಗೆಂದೇ ಗೃಹಾಧಾರಿತ ಶಿಕ್ಷಣದ ವ್ಯವಸ್ಥೆಯನ್ನು ಸರ್ಕಾರ 2005 ರಲ್ಲಿ ಜಾರಿಗೆ ತಂದಿತು.

ಈ ಗೃಹಾಧಾರಿತ ಶಿಕ್ಷಣದ ಉದ್ದೇಶಗಳೆಂದರೆ ಅರ್ಹರಾದ ಮಕ್ಕಳನ್ನು ಗುರ್ತಿಸುವುದು, ಪಾತ್ರ ಹಾಗೂ ಜವಾಬ್ದಾರಿಯನ್ನು ಅರಿಯುವುದು, ಅವಶ್ಯಕತೆಗೆ ತಕ್ಕಂತೆ ಪಠ್ಯವನ್ನು ಚಟುವಟಿಕೆಯನ್ನು ರೂಪಿಸುವುದು,



ಮಗು ತನ್ನ ಜೀವನದಲ್ಲಿ ಸ್ವಾವಲಂಬನೆ ಸಾಧಿಸಲು ಅವಕಾಶ ಕಲ್ಪಿಸುವುದು, ಸಮಾಜದ ಎಲ್ಲಾ ಮಕ್ಕಳಂತೆ ತಾನೂ ಸಮಾನ ಎಂಬ ಅಂಶವನ್ನು ಮನವರಿಕೆ ಮಾಡಿಕೊಡುವುದು ಆಗಿದೆ.

ಇಂತಹ ಮಕ್ಕಳು ಇರುವ ಪ್ರದೇಶದ ವ್ಯಾಪ್ತಿಗೆ ಬರುವ ಶಾಲೆಯಲ್ಲಿ ಎಸ್.ಡಿ.ಎಂ.ಸಿ. ಅಧ್ಯಕ್ಷರ ಸಭೆ ಕರೆದು ಸಭೆಯಲ್ಲಿ ಎಲ್ಲರ ಸಮ್ಮತಿ ಮೇರೆಗೆ ಒಬ್ಬ ಸ್ವಯಂ ಸೇವಕರನ್ನು ನೇಮಕ ಮಾಡಿಕೊಂಡು ಅವರಿಗೆ ಗೌರವ ಧನ ನಿಗದಿ ಮಾಡಬೇಕು. ಈ ಸ್ವಯಂ ಸೇವಕರು ಪ್ರತಿದಿನ ಆ ಮಗುವಿನ ಮನೆಗೆ ಹೋಗಿ ಮಗುವಿಗೆ ದೈನಂದಿನ ಕೌಶಲ್ಯಗಳಿಂದ ಕಲಿಸಲು ಪ್ರಾರಂಭಿಸಬೇಕು ಉದಾಹರಣೆಗೆ ಹಲ್ಲುಜ್ಜುವುದು, ಮುಖ ತೊಳೆಯುವುದು, ಮಲಮೂತ್ರ ವಿಸರ್ಜಿಸಿ ಶುಚಿಗೊಳಿಸಿಕೊಳ್ಳುವುದು, ಸ್ನಾನ ಮಾಡಿ ಬಟ್ಟೆ ಹಾಕಿಕೊಳ್ಳುವುದು, ಊಟ ತಿಂಡಿಯನ್ನು ಕೆಳಗೆ ಬೀಳಿಸಿದೆ ಹೇಗೆ ತಿನ್ನುವುದು, ಹೀಗೆ ಒಂದೊಂದಾಗಿ ದಿನನಿತ್ಯದ ಕೌಶಲ್ಯವನ್ನು ಕಲಿಸಬೇಕು.

ಈ ಮಗುವಿನ ಶಿಕ್ಷಣದ ಬಗ್ಗೆ ಶಾಲಾ ಶಿಕ್ಷಕರು ಮೇಲ್ವಿಚಾರಣೆ ನಡೆಸಬೇಕು ಹಾಗೂ ಕೆಲವು ದಾಖಲೆಗಳನ್ನು ನಿರ್ವಹಿಸಬೇಕು. ಸ್ವಯಂ ಸೇವಕರ ವೇಳಾಪಟ್ಟಿ, ಸ್ವಯಂ ಸೇವಕರ ಹಾಜರಿ ರಿಜಿಸ್ಟರ್, ಮಗುವಿನ ದಿನಚರಿ, ಮಗುವಿನ ಪ್ರಗತಿ ಪತ್ರ, ಕ್ರಿಯಾಯೋಜನೆ ಆ ಮಗುವಿನ ಕಲಿಕೆಗಾಗಿ ವೆಚ್ಚ ಮಾಡಿದ ಮತ್ತು ಕೊಂಡು ತಂದ ಕಲಿಕಾ ಉಪಕರಣಗಳ ಮೇಲೆ ಖರ್ಚಾದ ಹಣದ ವಿವರ ಹೀಗೆ ಎಲ್ಲಾ ದಾಖಲೆಗಳನ್ನು ಸರಿಯಾಗಿ ನಿರ್ವಹಿಸಬೇಕಾಗಿರುತ್ತದೆ.

ಯಾವ ಮಕ್ಕಳು ಇಂತಹ ಗೃಹಾಧಾರಿತ ಶಿಕ್ಷಣಕ್ಕೆ ಒಳಪಡುತ್ತವೆ ಎಂದರೆ, ಮಾನಸಿಕವಾಗಿ ದೈಹಿಕವಾಗಿ ಊನ ಇರುವ, ನಡೆದಾಡಲು ಸಾಧ್ಯವಾಗದ, ತಮ್ಮ ಕೆಲಸಗಳನ್ನು ತಾವೇ ಮಾಡಿಕೊಳ್ಳಲು ಸಾಧ್ಯವಾಗದ, ಪ್ರಪಂಚದ ಆಗು-ಹೋಗುಗಳ ಅರಿವು ಇಲ್ಲದೆ ಮಾನಸಿಕ ಹಾಗು ದೈಹಿಕ ವಿಕಲಾಂಗತೆ ಹೊಂದಿದ ಮಕ್ಕಳು ಈ ಗೃಹಾಧಾರಿತ ಶಿಕ್ಷಣಕ್ಕೆ ಒಳಪಡುತ್ತಾರೆ.

ಬುದ್ಧಿದೋಷವನ್ನು ವ್ಯಕ್ತಿಯ ಬುದ್ಧಿಮಟ್ಟವನ್ನು ಆಧರಿಸಿ ಈ ಕೆಳಗಿನಂತೆ ವರ್ಗೀಕರಿಸಲಾಗುತ್ತದೆ. ಇದನ್ನು ಮನೋವಿಜ್ಞಾನಿಗಳು ಮಾಪನ ಮಾಡಿ ವರದಿ ನೀಡಿದ್ದಾರೆ, ಇದನ್ನು ಐ.ಕ್ಯೂ. ನಲ್ಲಿ ಅಳೆಯಲಾಗುತ್ತಿದೆ.

**ಸೌಮ್ಯ: 75-89 IQ, ಸಾಧಾರಣ -50-74 IQ, ತೀವ್ರ: 30-49 IQ, ಅತಿ ತೀವ್ರ : 30 IQ ಕ್ಕಿಂತ ಕಡಿಮೆ. ಈ ನಾಲ್ಕು ವರ್ಗೀಕರಣದ ಕೊನೆಯ IQ ಹೊಂದಿದ ಮಕ್ಕಳು ಗೃಹಧಾರಿತ ಶಿಕ್ಷಣಕ್ಕೆ ಒಳಪಡುತ್ತಾರೆ.**

ಸರ್ಕಾರವು ಎಲ್ಲಾ ಮಕ್ಕಳಿಗೂ ಶಿಕ್ಷಣ ಕಡ್ಡಾಯಗೊಳಿಸಿ ದೈಹಿಕ ಹಾಗು ಮಾನಸಿಕ ಅಸಮರ್ಥರಿಗೂ ಶಿಕ್ಷಣ ನೀಡುವ ಉದ್ದೇಶದಿಂದ **ಗೃಹಾಧಾರಿತ ಶಿಕ್ಷಣ** ಎಂಬ ಒಂದು ಉತ್ತಮವಾದ ಕೆಲಸ ಮಾಡಿ ಎಲ್ಲಾ ಮಕ್ಕಳೊಂದಿಗೆ ಆ ಮಕ್ಕಳೂ ಕೂಡ ತಮ್ಮ ಹಕ್ಕನ್ನು ಪಡೆದು ಕೊಂಡು ಕಲಿಕೆಯಲ್ಲಿ ತೊಡಗಿಸಿ ಕೊಳ್ಳುವಂತೆ ಮಾಡಿದೆ, ಇದು ನಿಜಕ್ಕೂ ಪ್ರಶಂಸನೀಯ, ಇಂತಹ ನ್ಯೂನ್ಯತೆವುಳ್ಳ ಮಕ್ಕಳು ನಮ್ಮ ಮನೆಗಳಲ್ಲಿ ಅಥವಾ ಸುತ್ತಮುತ್ತ ಇದ್ದಲ್ಲಿ ಆ ಮಕ್ಕಳನ್ನು ಗೃಹಾಧಾರಿತ ಶಿಕ್ಷಣಕ್ಕೆ ಒಳಪಡಿಸುವ ನಿಟ್ಟಿನಲ್ಲಿ ನಾವು ನೀವೆಲ್ಲರೂ ಸಹಕರಿಸಬೇಕು. ಆಗ ಮಾತ್ರವೇ ಸರಕಾರದ ಯೋಜನೆ ಯಶಸ್ವಿಯಾಗಲು ಸಾಧ್ಯ.

ಈ ಶಿಕ್ಷಣದಿಂದ ಅತಿ ತೀವ್ರ ನ್ಯೂನ್ಯತೆವುಳ್ಳ ಮಕ್ಕಳು ಸಾಮಾನ್ಯ ಮಕ್ಕಳಂತೆ ಶಿಕ್ಷಣ ಕಲಿಯಲು ಸಾಧ್ಯವಾಗದಿದ್ದರೂ, ಸ್ವಾವಲಂಬನೆ ಸಾಧಿಸಲು ನೆರವು ನೀಡುತ್ತದೆ. ಸ್ವಂತ ಕೆಲಸಗಳಿಗೂ ಅವಲಂಬನೆ ಹೊಂದಿರುವ ಮಕ್ಕಳು ಕೊನೆ ಪಕ್ಷ ತಮ್ಮ ಕೆಲಸ ತಾವೇ ಮಾಡಿಕೊಳ್ಳಲು ಕಲಿತು ಕೊಳ್ಳುತ್ತಾರೆ. ಇಂತಹ ಮಕ್ಕಳು ಸಮಾಜಕ್ಕೆ, ಪೋಷಕರಿಗೆ ಹೊರೆ ಎಂಬ ಭಾವದಿಂದ ಹೊರ ಬಂದು ಪೋಷಕರು, ಶಿಕ್ಷಕರು ಹಾಗು ಸಮಾಜ ಅವರನ್ನು ಪ್ರೀತಿಯಿಂದ ವಿಶ್ವಾಸದಿಂದ ಕಾಣುತ್ತ ಆ ಮೂಲಕ ಆ ಮಕ್ಕಳಲ್ಲಿ ಆತ್ಮ ವಿಶ್ವಾಸ ತುಂಬುವ ಕೆಲಸವಾಗಬೇಕಾಗಿದೆ. ಈ ಶಿಕ್ಷಣದ ಮೂಲಕ ಮಕ್ಕಳಲ್ಲಿ ಮಾನಸಿಕ ಧೈರ್ಯ ತುಂಬ ಬೇಕಾಗಿದೆ. ಇಂತಹ ಮಕ್ಕಳಿಗೆ ಅನುಕಂಪ ಮಾತ್ರ ತೋರದೆ ಅದರ ಬದಲಾಗಿ ಪ್ರೇಮ, ವಾತ್ಸಲ್ಯ ತೋರುತ್ತ ದೇವರ ಮಕ್ಕಳು ಎಂಬಂತೆ ಅವರನ್ನು ಕಂಡಾಗ ಸೃಷ್ಟಿವೈಚಿತ್ರವನ್ನು ಸಮವಾಗಿ ಸ್ವೀಕರಿಸಿ ಅಂತಹ ಮಕ್ಕಳನ್ನು ಸಲಹಬೇಕು. ಇಲ್ಲಿ ಪೋಷಕರ, ಶಿಕ್ಷಕರ ಪಾತ್ರವೇ ದೊಡ್ಡದು, ಅಂತಹ ಪಾತ್ರವನ್ನು ಯಶಸ್ವಿಯಾಗಿ ನಿರ್ವಹಿಸಿ ಗೃಹಧಾರಿತ ಶಿಕ್ಷಣಕ್ಕೆ ಒಳಪಡುವ ಮಕ್ಕಳ ಬದುಕು ಹಸನಾಗಲಿ.